ಆದ್ದರಿಂದ, ನೀವು ಅಲ್ಲಾಹುವಿನಲ್ಲಿ ಬೇಡುವಾಗ, 'ಫಿರ್ದೌಸ್' ಅನ್ನು ಬೇಡಿರಿ

ಉಬಾದ ಬಿನ್ ಸಾಮಿತ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಸ್ವರ್ಗದಲ್ಲಿ ನೂರು ದರ್ಜೆಗಳಿವೆ. ಪ್ರತಿ ಎರಡು ದರ್ಜೆಗಳ ನಡುವಿನ ಅಂತರವು ಆಕಾಶ ಮತ್ತು ಭೂಮಿಯ ನಡುವಿನ ಅಂತರದಷ್ಟಿದೆ. 'ಫಿರ್ದೌಸ್' ಅವುಗಳಲ್ಲಿ ಅತ್ಯುನ್ನತ ದರ್ಜೆಯಾಗಿದೆ. ಅದರಿಂದಲೇ
ಸ್ವರ್ಗದ ನಾಲ್ಕು ನದಿಗಳು ಉಕ್ಕಿ ಹರಿಯುತ್ತವೆ. ಅದರ ಮೇಲೆ 'ಅರ್ಶ್' (ಅಲ್ಲಾಹುವಿನ ಸಿಂಹಾಸನ)
ಇದೆ. ಆದ್ದರಿಂದ, ನೀವು ಅಲ್ಲಾಹುವಿನಲ್ಲಿ ಬೇಡುವಾಗ, 'ಫಿರ್ದೌಸ್' ಅನ್ನು ಬೇಡಿರಿ".
[صحيح] [رواه الترمذي]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ತಿಳಿಸುವುದೇನೆಂದರೆ, ಪರಲೋಕದ ಸ್ವರ್ಗದಲ್ಲಿ ನೂರು ದರ್ಜೆಗಳು ಮತ್ತು ಸ್ಥಾನಮಾನಗಳಿವೆ. ಪ್ರತಿ ಎರಡು ದರ್ಜೆಗಳ ನಡುವಿನ ಅಂತರವು ಆಕಾಶ ಮತ್ತು ಭೂಮಿಯ ನಡುವಿನ ಅಂತರದಷ್ಟಿದೆ. ಈ ಸ್ವರ್ಗಗಳಲ್ಲಿ ಅತ್ಯುನ್ನತವಾದುದು 'ಜನ್ನತುಲ್ ಫಿರ್ದೌಸ್'. ಅದರಿಂದಲೇ ಸ್ವರ್ಗದ ನಾಲ್ಕು ನದಿಗಳು ಉಕ್ಕಿ ಹರಿಯುತ್ತವೆ. ಫಿರ್ದೌಸ್ನ ಮೇಲೆ 'ಅರ್ಶ್' ಇದೆ. ಆದ್ದರಿಂದ, ನೀವು ಅಲ್ಲಾಹುವಿನಲ್ಲಿ ಬೇಡುವುದಾದರೆ, 'ಫಿರ್ದೌಸ್' ಅನ್ನು ಬೇಡಿರಿ. ಏಕೆಂದರೆ ಅದು ಎಲ್ಲಾ ಸ್ವರ್ಗಗಳಿಗಿಂತ ಮೇಲಿದೆ.

https://sunnah.global/hadeeth/kn/show/65188